Reg No. B G 155 8-7-1699

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮೊಪ್ಲಾಸ್ಥಾನದ ಬಗ್ಗೆ ಮುಸ್ಲಿಂ ದೇಶಗಳ ಅಭಿನಂದನೆ

ಬಂದ್‌ನ ಮೂರನೇ ದಿನ

ಹೈದರಾಬಾದು— ಪೋಲೀಸು ದಬ್ಬಾಳಿಕೆ ಪ್ರತಿಭಟಿಸಿ ನಿನ್ನೆ ಬಂದ್ ನಡೆಸಲಾಯಿತು - ಇದು ನಿರಂತರ ಮೂರನೇ ದಿನದ ಬಂದ್ – ಅಲ್ಲಲ್ಲೇ ಗಲಭೆಗಳು, ಕಲ್ಲೆಸೆತ ಲೂಟಿ, ಅಗ್ನಿಸ್ಪರ್ಶ ನಡೆದವು - ಪುರಾಣ್ ಪೂಲ್‌ನಲ್ಲಿ ಪೋಲೀಸರು ಮಾಡಿದ ಗೋಳೀಬಾರ್‌ನಲ್ಲಿ ಒಬ್ಬ ಸತ್ತ – ಕರ್ಫ್ಯೂ ಜಾರಿಮಾಡಲಾಗಿದೆ.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮಿತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಸೆರಾ ಟಾಕೇಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ಸಬಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಧರ್ಮರಾಜನ ರಾಜಸೂಯಯಾಗ

ಕೊಡಗಹಳ್ಳಿಯ ಶ್ರೀ ರಾಮಗಿರಿಕೃಪಾ ಪೋಷಿತ ನಾಟಕ ಮಂಡಳಿಯವರು ಗ್ರಾಮದಮುಖ್ಯಸ್ಥರಾದ ಪ|| ಜವರೇಗೌಡರು ಯ|| ಕೆಂಪೇಗೌಡರ ಪುಟ್ಟಸ್ವಾಮಿಗೌಡರು ರೈಸ್‌ಮಿಲ್ ಮುಳೈಗೌಡರು ಇವರ ಸಮ್ಮುಖದಲ್ಲಿ ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಮಾರಮ್ಮನ ಗುಡಿ ಕಟ್ಟಡದ ನಿಧಿಗಾಗಿ ಮೈಸೂರು, ಪುರಭವನದಲ್ಲಿ 9 ನೇ ತಾ|| ರಾತ್ರಿ 10 ಘಂಟೆಗೆ ಧರ್ಮರಾಜನ ರಾಜಸೂಯಯಾಗ ನಾಟಕ ಅಭಿನಯಿಸುವರು. ಮುಖ್ಯ ಅತಿಥಿಗಳು : ಶ್ರೀಗಳಾದ ಎಂ ಕೆ ಮುಕುಂದರಾವ್. ಕೆ ಪಿ ಜಂಬೂಗೌಡರು, ಎಸ್ ನಾರಾಯಣ ರಾಜು.

ಇಬ್ರು ಖೆದಿಗಳ್ಗೆ ರೂ 6.28 ಲಕ್ಷ ಖರ್ಚು

ಬೊಂಬಾಯಿ— ಅಕ್ರಮ ಸಾಗಾಣಿಕೆಗಾಗಿ ಬಂಧಿತರಾಗಿರುವ ಕಲ್ಲಾಳ್ ಮತ್ತು ಡಾಂಘ್‌ರನ್ನು 1967 ನೇ ಏಪ್ರಿಲ್ ನಿಂದ ಇವರಿಗಾಗಿ ತಯಾರಿಸಿದ ಬೊಂಬಾಯಿ ಹಂಗಾಮಿ ಜಿಲ್ಲಾ ಕಾರಾಗೃಹದಲ್ಲಿ ಇಡಲಾಗಿದೆಯೆಂದೂ, 67-68, ಈ ಮೇ ವರೆಗೆ ಇವರಿಗಾಗಿ ಸರ್ಕಾರ ರೂ 6.28 ಲಕ್ಷ ಖರ್ಚು ಮಾಡಿದೆಯೆಂದೂ ಮುಖ್ಯ ರಾಷ್ಟ್ರ ಶಾಸನಸಭೆಯಲ್ಲಿ ತಿಳಿಸಲಾಯಿತು.

ಬಸ್ ಅನಾಹುತ

ಮುಜಾಫರಪುರ— ಮಲಿನಗರನ ಹತ್ತಿರ ಒಂದು ಬಸ್ ಹಳ್ಳಕ್ಕೆ ಬಿದ್ದು 4 ಜನ ಸತ್ತು 60 ಮಂದಿ ಗಾಯಗೊಂಡರು.

○ಬೆಂಗಳೂರು— ಗಾಂಧಿ ಶತಮಾನೋತ್ಸವ ಸಂಬಂಧದಲ್ಲಿ ವಿವಿಧ ರೀತಿಯಲ್ಲಿ ಖೈದಿಗಳಿಗೆ ಶಿಕ್ಷೆ ಕಡಿತ ಮಾಡಲು ಸರ್ಕಾರ ನಿರ್ಧರಿಸಿದೆ

ಗಾಂಧೀಜಿ ಅಂಚೆಚೀಟಿ

ಲಂಡನ್— ಬ್ರಿಟನ್ನಿನಲ್ಲಿ ಗಾಂಧಿ ಅಂಚೆ ಚೀಟಿಯು ಆಗಸ್ಟ್ 13 ರಂದು ಎಲ್ಲ ಅಂಚೇಕಚೇರಿಗಳಲ್ಲೂ ಮಾರಲಾಗುತ್ತೆ – ಸಾಗರದಾಚೆ ನಾಯಕನ ಸ್ಮರಣಾರ್ಥ ಅಂಚೆಚೀಟಿ ಹೊರಡಿಸಿದ್ದು ಇದು ಪ್ರಪ್ರಥಮ.

ಫೇರಾವೊ

ಪಂಜಿಂ— ಬೇಟಂ-ಪಂಜಿಂಗೆ ದೋಣಿ ಟಿಕೇಟು ದರವನ್ನು ಹಿಂದಿನಂತೆಯೇ ಇಡುವ ಭರವಸೆ ಪಡೆಯಲು ನ್ಯಾವಿಗೇರ್ಷ ಇಲಾಖೆ ಕಚೇರಿಯನ್ನು 150 ವಿದ್ಯಾರ್ಥಿ ವಿದ್ಯಾರ್ಥಿನಿಯರು 6 ಗಂಟೆ ಕಾಲ ಫೇರಾವೊ ಮಾಡಿದರು.

ಅಧ್ಯಕ್ಷರೊಡನೆ ಭೋಜನ

ಹೌಸ್ಟ್ (ಟಿಕ್ಸಾಸ್)— ಅಪೋಲೊ 11 ರಲ್ಲಿ ಚಂದ್ರನಲ್ಲಿಗೆ ಪ್ರಯಾಣ ಮಾಡುವ ಗಗನಯಾನಿಗಳು ಅವರ ಪ್ರಯಾಣಕ್ಕೆ ಮುಂಚೆ ತಮ್ಮೊಡನೆ ಭೋಜನ ಮಾಡಬೇಕೆಂದು ಅಧ್ಯಕ್ಷ ನಿಕ್ಸನ್ರು ಯೋಜಿಸಿರುವರೆಂದು ಹೇಳಲಾಗಿದೆ.

ಏ ಐ ಸಿ ಸಿ

ಬೆಂಗಳೂರು - ಲಾಲ್‌ಬಾಗ್ ಗ್ಲಾಸ್ ಹೌಸ್‌ನಲ್ಲಿ ತಾ|| 10 ರಿಂದ 4 ದಿನಗಳು ನಡೆಯುವ ಏ ಐ ಸಿ ಸಿ ಅಧಿವೇಶನಕ್ಕೆ ಸಾರ್ವಜನಿಕರಿಗೆ ಪ್ರವೇಶವಿಲ್ಲವೆಂದು ವರದಿಯಾಗಿದೆ – 2500 ಕುಳಿತುಕೊಳ್ಳಲು ಏರ್ಪಡಿಸಲಾಗಿದೆ – ಪ್ರಧಾನಿಗಳು ಅನೇಕ ಕಾರ್ಯಕ್ರಮಗಳನ್ನು ಇಟ್ಟುಕೊಂಡಿರುವರು.

ಬಿಸಲು ಕುದುರೆ ಸವಾರಿ

ಶ್ರೀನಗರ— ಮುಂದಿನ ಮಹಾಚುನಾವಣೆಯಲ್ಲಿ ಮತದಾನವು ನ್ಯಾಯವಾದ ಅನಿರ್ಬಂಧ ರೀತಿಯಲ್ಲಿ ನಡೆದರೆ, ಅತಿ ಬಹುಸಂಖ್ಯೆಯಲ್ಲಿ ಪ್ಲೆಬಿಸೈಟ್ ಫ್ರಂಟಿನವರು ಗೆಲ್ಲುವರೆಂದೂ, ಆ ಮೇಲೆ ಭಾರತ-ಪಾಕಿಸ್ತಾನಗಳ ನಡುವೆ ಸೌಹಾರ್ದ್ರ ಸ್ಥಾಪಿಸಲು ಪ್ರಯತ್ನಿಸಲಾಗುವುದೆಂದೂ ಷೇಅಬ್ದುಲ್ಲರು ಹೇಳಿದರು.

ಮಾಪ್ಲಾಸ್ಥಾನಕ್ಕೆ ಅಭಿನಂದನೆಗಳು

ಕಲ್ಲೀಕೋಟೆ— ಹೊಸ ಮಲ್ಲಾಪುರಂ ಜಿಲ್ಲೆ ಸ್ಥಾಪನೆಯಾದನಂತರ, ಪಾಕಿಸ್ತಾನ ಮತ್ತಿತರ ಮುಸ್ಲಿಂ ದೇಶಗಳಿಂದ ಮಾಪ್ಲಸ್ಥಾನ ಹೊಂದಿದ ಬಗ್ಗೆ ಮುಸ್ಲಿಂ ಲೀಗ್ ನಾಯಕರಿಗೆ ಅಭಿನಂದನೆಗಳು ಬರುತ್ತಿವೆಯೆಂದ ಕೇರಳ ಜನಸಂಘದ ಕಾರ್ಯದರ್ಶಿ ಶ್ರೀ ರಾಜಗೋಪಾಲ್ ಹೇಳಿರುವರು — ಮುಸ್ಲಿಂ ಲೀಗ್ ವಿದ್ಯಾಮಂತ್ರಿ ಮಹಮದ್ ಕೋಯಾರವರು ಸಂಗೀತ ಉಪಾಧ್ಯಾಯರುಗಳನ್ನು ನೇಮಿಸುವದನ್ನು ನಿಲ್ಲಿಸಿ, ಸ್ಕೂಲುಗಳಲ್ಲಿ ಮುಸ್ಲಿಂ ವಿದ್ಯಾರ್ಥಿಗಳಿಗೆ ಖಡ್ಡಾಯವಾಗಿ ಅರಾಬಿಕ್ ಭಾಷೆ ಕಲಿಸಲು 6000 ಅರಾಬಿಕ್ ಉಪಾಧ್ಯಾಯರನ್ನು ನೇಮಿಸುವದನ್ನು ಖಂಡಿಸಿರುವರು.

ಗಾಂಧಿ ಪ್ರಶಂಸೆ

ಬರ್ನ್— ವಿಶ್ವದ ಅತಿ ಕಠಿಣ ಸಮಸ್ಯೆಯನ್ನು ಹಿಂಸಾಕೃತ್ಯವಿಲ್ಲದೆ ಪರಿಹರಿಸಬಹುದೆಂದು ನಂಬಿರುವವರೆಲ್ಲರೂ ಮಹಾತ್ಮಾ ಗಾಂಧೀಜಿಯವರ ಜೀವಿತ ಮತ್ತು ಕಾರ್ಯಗಳನ್ನು ವ್ಯಾಸಂಗ ಮಾಡಬೇಕೆಂದು ಭಾರತ ಉಪಪ್ರಧಾನಿ ಶ್ರೀ ಮೊರಾರ್ಜಿ ದೇಸ್ಯಾರ ಗೌರವಾರ್ಥವಾಗಿ ಏರ್ಪಡಿಸಿದ್ದ ಭೋಜನಕೂಟದಲ್ಲಿ ಪಶ್ಚಿಮ ಜರ್ಮನಿ ಛಾನ್ಸಲರ್ ಕೇಸಿಂಗರ್ ಹೇಳಿದರು.

ದೇಶದ್ರೋಹಿಗಳು

ಹೈದರಾಬಾದು— ಶ್ರೀ ಬ್ರಹ್ಮಾನಂದರೆಡ್ಡಿಯವರ ನಾಯಕತ್ವದಲ್ಲಿ ವಿಶಾಲ ವಿರುನದಾಗಿ ಮತನೀಡಿದ ತೆಲಂಗಾಣಾ ನಾಯಕರನ್ನು ದೇಶದ್ರೋಗಳೆಂದು ವಿವರಿಸಿ, ಅವರ ಮೇಲೆ ಸಮಾಜ ಬಹಿಷ್ಕಾರ ಹಾಕಬೇಕೆಂದು ಪ್ರಜಾ ಸಮಿತಿ ಹಂಗಾಮಿ ಅಧ್ಯಕ್ಷೆ ಶ್ರೀಮತಿ ಸದಾಲಕ್ಷ್ಮಿಯವರು ತಿಳಿಸಿದರು.

○ಕಲ್ಕತ್ತಾ— ಶಾಸನಸಭೆಯಲ್ಲಿ ನಿನ್ನೆ ಗೊಂದಲವಾಗಿ ಹೊಡೆದಾಟವಾಗಿ ಒಬ್ಬ ಸದಸ್ಯರಿಗೆ ಕಣ್ಣಿನ ಕೆಳಗೆ ರಕ್ತ ಸೋರುವ ಗಾಯವಾಯಿತು – ಕಾಂಗ್ರೆಸಿಗರ ಸಭಾ ಪರಿತ್ಯಾಗವಾಯಿತು.

ಹೆಣ್ ಹರಾಜ್

ವಿಲ್ಲಿಪ (ಡಾಡ್)— ಫೆಡರಾಲ್ ರಿಪಬ್ಲಿಕ್ ಜರ್ಮನಿಯ ರೀಸ್‌ಲ್ಯಾಂಡಿನಲ್ಲಿ ಪುರಾತನ ಕಾಲದಲ್ಲಿದ್ದ ಕನ್ಯೆಯರನ್ನು ಹರಾಜುಮಾಡುವ ಪದ್ಧತಿ ಇನ್ನೂ ಈಗಲೂ ನಡೆಯುತ್ತಿದೆ. ಮೇ ತಿಂಗಳಲ್ಲಿ ವಸಂತ ಋತುವಿನಲ್ಲಿ ಈ ಕಾರ್ಯವು ರೀಸ್‌ಲ್ಯಾಂಡಿನ ಹಳ್ಳಿಗಳಲ್ಲಿ ನಡೆಯುತ್ತಿದೆ 18 ರಿಂದ 60 ರ ಒಳಗಿನ ವಯಸ್ಸಿನ ಅವಿವಾಹಿತ ಸ್ತ್ರೀಯರನ್ನು ಹರಾಜುಮಾಡುವರು. ಕನ್ಯೆಯರ ಬೆಲೆ 150 ಮಾರ್ಕ್‌ಗಳವರೆಗೂ ಹೋಗುವುದು. ಇವರಲ್ಲಿ ಹೆಚ್ಚು ರೂಪಸುಂದರಿಯರಿಲ್ಲದಿದ್ದರೂ ಕೆಲಸಕ್ಕೆ ಯೋಗ್ಯರಾಗಿರುತ್ತಾರೆ. ಹರಾಜಿನಲ್ಲಿ ಬಂದ ಹಣವನ್ನು ವಸಂತಕಾಲದ ನೃತ್ಯ ಮತ್ತಿತರ ಹವ್ಯಾಸಗಳಿಗೆ ಉಪಯೋಗಿಸುತ್ತಾರೆ. ಹೆಚ್ಚು ಬೆಲೆ ಕೊಟ್ಟ ಪುರುಷನನ್ನು ರಾಜನನ್ನಾಗಿಯೂ ಭಾವಿಸುತ್ತಾರೆ. ಹರಾಜಿನಲ್ಲಿ ಕೊಂಡ ಸ್ತ್ರೀಯೊಡನೆ ಪುರುಷನು ಆ ತಿಂಗಳು ನೈಜಜೀವನ ದಂಪತಿಗಳಾಗಿರಬೇಕು. (ಯೂಪಿಎಸ್)

ಯು ಜಿ ಸಿ ವ್ಯಾಸಂಗ ವೇತನ

ನವದೆಹಲಿ— ವಿಶ್ವವಿದ್ಯಾನಿಲಯದ ಗ್ರಾಂಟ್ಸ್ ಕಮಿಷನ್ನಿನವರು, ಸಂಶೋಧನಾತ್ಮಕ ವ್ಯಾಸಂಗಕ್ಕಾಗಿ ಸೀನಿಯರ್ ಫೆಲೋಷಿಪ್‌ಗಳನ್ನೂ, ಜೂನಿಯರ್ ಫೆಲೋಷಿಪ್‌ಗಳನ್ನೂ ಕೊಟ್ಟಿರುವರು. ಸೀನಿಯರ್ ಫೆಲೋಷಿಪ್ ತಿಂಗಳಿಗೆ ರೂ. , ಜೂನಿಯರ್ ಫೆಲೋಷಿಪ್ ತಿಂಗಳಿಗೆ ರೂ. 300.

— ಪುರಂಧರದಾಸರ ದಿವ್ಯವಾಣಿ —

ಸತ್ಯ ಶೌಚವಿಲ್ಲದೆ ಆಚಾರವೇವೆ ?

ಚಿತ್ತಶುದ್ಧಿಯಿಲ್ಲದ ಜ್ಞಾನವಿನೇಕೆ ?

ಭಕ್ತಿ—ಭಾವವಿಲ್ಲದ ದೇವಪೂಜೆ ಏಕೆ ?



Protect the Cow

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್

4-7-69 ರಿಂದ ಅಮೋಘ ಆರಂಭ

ಉತ್ತರ ಭಾರತದಲ್ಲಿ ಕೋಲಾಹಲ ಎಬ್ಬಿಸಿರುವ ಅನೇಕ ಆಶ್ಚರ್ಯ ವಿಷಯಗಳಿಂದ ಕೂಡಿದ ಅತ್ಯಮೋಘ ಹಿಂದಿ ಚಿತ್ರ ನೀವು ನೋಡಲು ತಪ್ಪಿಸಿರಿ

ಅನೋಖಿ ರಾತ್

ಸಂಗೀತ — ರೋಷನ್

ತಾರಾಗಣ : ಸಂಜೀವ ಕುಮಾರ್ ಜಹೀದ ತರುಣ ಬೋಸ್

ಮುಖ್ರಿ ಮುಂತಾದವರು

[ದಿನ 3 ಪ್ರದರ್ಶನಗಳು]

ಆಪೆರಾ ಅಮೋಘ 2ನೇ ವಾರ

— ಸಕಲರೂ ನೋಡಿ ಆನಂದಿಸಬೇಕಾದ ಅಮೋಘ ಕನ್ನಡ ಚಿತ್ರ —

ಮಕ್ಕಳೇ ಮನೆಗ ಮಾಣಿಕ್ಯ

ನಟವರ್ಗ— ಉದಯಕುಮಾರ್, ಬಿ. ವಿ. ರಾಧಾ, ಆದವಾನಿ ಲಕ್ಷ್ಮಿದೇವಿ — ಶೈಲಶ್ರೀ, ಜಯ, ದಿನೇಶ್, ಮಾಸ್ಟರ್, ಕೃಷ್ಣಕುಮಾರ್, ಬೇಬಿ ಪ್ರತಾಪ

ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrat very soon

The President, the Prime Minister, H H. the Maharaja o Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R.S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata V S Krishna Rao (Proprietor) at the Satyavadi Press Chamarajapuram, Mysore 4